ಆ) ಸರ್ಕಾರದ ಆಡಳಿತ ವ್ಯವಸ್ಥೆಯಲ್ಲಿ ಖರ್ಚು ವೆಚ್ಚ ಕಡಿಮೆ ಮಾಡಲು ಇವುಗಳನ್ನು ಒಂದೂಗೂಡಿಸುವುದು ಸೂಕ್ತವೆಂದು ಸರ್ಕಾರ ಯೋಚಿಸಿದೆಯೇ; ಹಾಗಿದ್ದಲ್ಲಿ, ಯಾವ ಹಂತದಲ್ಲಿದೆ; (ವಿವರ ಒದಗಿಸುವುದು)?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು) :

ಅ) ಗುರಿ ಹಾಗೂ ಉದ್ದೇಶ ಒಂದೇ ಅಲ್ಲದಿರುವುದರಿಂದ ಅವುಗಳನ್ನು ಒಂದುಗೂಡಿಸುವ ಯೋಜನೆ ಸರ್ಕಾರದ ಮುಂದೆ ಇರುವುದಿಲ್ಲ.

ಆ) ಇಲ್ಲ.

<u>ಟ್ರ್ಯಾಕ್ಟರ್ ಖರೀದಿಗೆ ಸಹಾಯಧನ</u> :

454 (5304) ಶ್ರೀ ಸಿ.ಎಂ. ಉದಾಸಿ (ಹಾನಗಲ್) :– ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದಲ್ಲಿ ಟ್ರ್ಯಾಕ್ಟರ್ ಖರೀದಿಗೆ ಸಹಾಯಧನ ಕೋರಿ ಬಂದಿರುವ ಅರ್ಜಿಗಳೆಷ್ಟು; (ಜಿಲ್ಲಾವಾರು ವಿವರ ನೀಡುವುದು);

2) ಈವರೆಗೂ ಜಿಲ್ಲಾವಾರು ಎಷ್ಟು ಸಹಾಯಧನ ನೀಡಲಾಗಿದೆ (ವಿವರ ನೀಡುವುದು);

3) ಹಾವೇರಿ ಜಿಲ್ಲೆಯಲ್ಲಿ ಸಹಾಯಧನ ಕೋರಿರುವ ಅರ್ಜಿದಾರರ ಸಂಖ್ಯೆ ಎಷ್ಟು ಹಾಗೂ ಸಹಾಯಧನ ಪಡೆದವರ ಸಂಖ್ಯೆ ಎಷ್ಟು (ತಾಲ್ಲೂಕುವಾರು ಮಾಹಿತಿ ಒದಗಿಸುವುದು)?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) :

1) 2005–06ನೇ ಸಾಲಿನಲ್ಲಿ ಇದುವರೆಗೆ ರಾಜ್ಯದಲ್ಲಿ ಟ್ರ್ಯಾಕ್ಟರ್ ಖರೀದಿಗೆ ಸಹಾಯಧನ ಕೋರಿ ಒಟ್ಟು 2319 ಅರ್ಜಿಗಳು ಬಂದಿವೆ. ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

2) ಸದರಿ ಕಾರ್ಯಕ್ರಮವು ಇದೇ ವರ್ಷದಿಂದ ರಾಜ್ಯ ವಲಯದಿಂದ ಜಿಲ್ಲಾ ವಲಯಕ್ಕೆ ವರ್ಗಾಯಿಸಲ್ಪಟ್ಟಿದ್ದು ಇದುವರೆಗೆ ಸಹಾಯಧನ ನೀಡಿರುವುದಿಲ್ಲ.

3) ಹಾವೇರಿ ಜಿಲ್ಲೆಯಲ್ಲಿ ಟ್ರ್ಯಾಕ್ಟರ್ ಖರೀದಿಗಾಗಿ ರಿಯಾಯಿತಿ ಧನ ಕೋರಿ 36 ಅರ್ಜಿಗಳು ಬಂದಿದ್ದು, ಇದುವರೆಗೆ ಸಹಾಯಧನ ವಿತರಿಸಲಾಗಿಲ್ಲ. ತಾಲ್ಲೂಕುವಾರು ಬಂದಿರುವ ಅರ್ಜಿಗಳ ವಿವರ ಇಂತಿದೆ.

ಹಾವೇರಿ – 6, ರಾಣೆಬೆನ್ನೂರು – 0, ಹಿರೇಕೆರೂರು – 0, ಬ್ಯಾಡಗಿ – 9, ಹಾನಗಲ್ – 10, ಶಿಗ್ಗಾಂವ್ – 6 ಮತ್ತು ಸವಣೂರು – 5 (ಒಟ್ಟು 36)

ಅನುಬಂಧ

ಪ್ರಶ್ನೆ – 5304

2005–06ನೇ ಸಾಲಿನಲ್ಲಿ ಟ್ರ್ಯಾಕ್ಟರ್ ಖರೀದಿಗಾಗಿ ರಿಯಾಯಿತಿ ಧನ ಕೋರಿ ಬಂದಿರುವ ಅರ್ಜಿಗಳ ವಿವರ :

ಕ್ರ.ಸಂ	ಜಿಲ್ಲೆ	ಅರ್ಜಿಗಳ ಸಂ.
1	ಬೆಂಗಳೂರು (ನ)	11
2	ಬೆಂಗಳೂರು (ಗ್ರಾ)	28
3	ಕೋಲಾರ	53
4	ತುಮಕೂರು	185
5	ಶಿವಮೊಗ್ಗ	54
6	ಚಿತ್ರದುರ್ಗ	168
7	ದಾವಣಗೆರೆ	187
8	ಮೈಸೂರು	30
9	ಚಾಮರಾಜನಗರ	21
10	ಮಂಡ್ಯ	54
11	ಕೊಡಗು	21
12	ಹಾಸನ	13
13	ಚಿಕ್ಕಮಗಳೂರು	72
14	ದಕ್ಷಿಣ ಕನ್ನಡ	7
15	ಉಡುಪಿ	0
16	ಧಾರವಾಡ	193
17	ಗದಗ	123
18	ಹಾವೇರಿ	36

19	ಉತ್ತರ ಕನ್ನಡ	97
20	ಬೆಳಗಾಂ	103
21	ಬಿಜಾಪುರ	15
22	ಬಾಗಲಕೋಟೆ	95
23	ರಾಯಚೂರು	277
24	ಕೊಪ್ಪಳ	313
25	ಬಳ್ಳಾರಿ	112
26	ಗುಲ್ಬರ್ಗಾ	31
27	ಬೀದರ್	20
	ಒಟ್ಟು	**2319**

ಸರ್ಕಾರ ಇಲಾಖೆಯ ಬಡ್ತಿ ನಿರೀಕ್ಷ ಅಧಿಕಾರಿಗಳು :

455 (5535) ಶ್ರೀ ದೊಡ್ಡನಗೌಡ ಹನುಮನಗೌಡ ಪಾಟೀಲ್ (ಕುಷ್ಟಗಿ) :– ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2002–03, 2003–04 ಮತ್ತು 2004–05ನೇ ಸಾಲಿನಲ್ಲಿ ಸಹಕಾರ ಇಲಾಖೆಯ ಯಾವ ಯಾವ ಶ್ರೇಣಿಯ ಅಧಿಕಾರಿಗಳು ಬಡ್ತಿ ನಿರೀಕ್ಷೆಯಲ್ಲಿದ್ದರು ಹಾಗೂ ನಿರೀಕ್ಷೆಯಲ್ಲಿದ್ದ ಅವಧಿ ಎಷ್ಟು;

ಆ) ಈ ಹುದ್ದೆ ನಿರೀಕ್ಷೆಯಲ್ಲಿದ್ದ ಅವಧಿಯಲ್ಲಿ ವೇತನ ಪಾವತಿ ಮಾಡಲಾಗಿದೆಯೇ; ಹಾಗಿದ್ದಲ್ಲಿ ಅದರ ಮೊತ್ತವೆಷ್ಟು;

ಇ) ಈ ಅವಧಿಯಲ್ಲಿ ಯಾವ ಹುದ್ದೆಗಳು ಖಾಲಿಯಾಗಿರಲಿಲ್ಲವೇ; ಹಾಗಿಲ್ಲದಿದ್ದಲ್ಲಿ ಹುದ್ದೆ ನಿರೀಕ್ಷೆಯಲ್ಲಿಡಲು ಕಾರಣವೇನು;

ಈ) ಹುದ್ದೆಯಲ್ಲಿದ್ದು ಕಾರ್ಯನಿರ್ವಹಿಸದೇ ವೇತನ ಪಡೆದ ಅಧಿಕಾರಿಗಳ ವಿರುದ್ಧ ಸರ್ಕಾರ ಶಿಸ್ತಿನ ಕ್ರಮ ಕೈಗೊಂಡಿದೆಯೇ (ವಿವರ ನೀಡುವುದು)?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು) :

ಅ) ಇಂತಹ ಅಧಿಕಾರಿಗಳು ಬಡ್ತಿಯ ಮೇಲೆ ನಿರೀಕ್ಷಣೆಯಲ್ಲಿರಲಿಲ್ಲ.

ಆ) ಉದ್ಭವಿಸುವುದಿಲ್ಲ.